ಲಿಖಿತ ಮೂಲಕ ಉತ್ತರಿಸುವ

# ಕರ್ನಾಟಕ ವಿಧಾನ ಪರಿಷತ್ತು

## ನೂರ ಮೂವತ್ತೆಂಟನೆಯ ಅಧಿವೇಶನ

## ಮಂಗಳವಾರ, ದಿನಾಂಕ : 23ನೇ ಜುಲೈ, 2019

ರಾಜ್ಯದಲ್ಲಿರುವ ಗ್ರಾಮ ಪಂಚಾಯಿತಿ ಲೆಕ್ಕಪರಿಶೋಧನೆ ಬಾಕಿ ಇರುವ ಬಗ್ಗೆ

ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

548 (684) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದ 6022 ಗ್ರಾಮ ಪಂಚಾಯತಿಗಳಲ್ಲಿ ಎಷ್ಟು ವರ್ಷಗಳಿಂದ ಲೆಕ್ಕಪರಿಶೋಧನೆ ಬಾಕಿ ಉಳಿದಿದೆ ; (ಪಂಚಾಯತ್‌ವಾರುಜಿ ಲ್ಲಾವಾರು ಮಾಹಿತಿ ನೀಡುವುದು)

(ಆ) ಲೆಕ್ಕಪರಿಶೋಧನಾ ವರದಿಯಂತೆ ಗ್ರಾಮ ಪಂಚಾಯತಿಗಳಲ್ಲಿನ ಒಟ್ಟಾರೆ ಆಡಿಟ್ ಆಕ್ಷೇಪಣಾ ಮೊತ್ತ ಮತ್ತು ವಸೂಲಾತಿಗೆ ಬಾಕಿ ಮೊತ್ತ ಎಷ್ಟು ; (ಗ್ರಾಮ ಪಂಚಾಯತಿವಾರು, ತಾಲ್ಲೂಕು ಮತ್ತು ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ರಾಜ್ಯದ ಎಷ್ಟು ಗ್ರಾಮ ಪಂಚಾಯತ್‌ಗಳಲ್ಲಿ ಕ್ಯಾಷ್-ಇನ್-ಹ್ಯಾಂಡ್ ಪ್ರಕರಣಗಳಿವೆ ; ಒಟ್ಟು ಮೊತ್ತ ಕ್ಯಾಷ್-ಇನ್-ಹ್ಯಾಂಡ್ ಇದೆ ; ಕಾರಣೀಕರ್ತರಾದ ಅಧಿಕಾರಿ-ನೌಕರರು ಯಾರು ;

(ಈ) ಗ್ರಾಮ ಪಂಚಾಯತ್‌ಗಳ ನಿಧಿಗಳಿಗೆ ಸಂಬಂಧಿಸಿದಂತಿರುವ ವಸೂಲಾತಿ ಮೊತ್ತ, ಕ್ಯಾಷ್ ಇನ್ ಹ್ಯಾಂಡ್ ಮತ್ತು ಹಣ ದುರುಪಯೋಗಕ್ಕೆ ಸಂಬಂಧಿಸಿದಂತೆ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ತಾಲ್ಲೂಕು ಕಾರ್ಯ ನಿರ್ವಾಹಣ ಅಧಿಕಾರಿ ಹಾಗೂ ಜಿಲ್ಲಾ ಪಂಚಾಯತ್ ಸಿಇಓ ಗಳು ವಿಫಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಗ್ರಾಮ ಪಂಚಾಯತ್‌ಗಳಲ್ಲಿ ವಸೂಲಾತಿ ಮೊತ್ತದ ಹಣ ದುರುಪಯೋಗ ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಊ) ಗ್ರಾಮ ಪಂಚಾಯತ್‌ಗಳಲ್ಲಿ ಲೆಕ್ಕಪತ್ರ ಮತ್ತು ಹಣಕಾಸು ಶಿಸ್ತು ತರಲು ಪ್ರತಿ ಗ್ರಾಮ ಪಂಚಯತ್‌ಗಳಿಗೆ ಲೆಕ್ಕ ಸಹಾಯಕರನ್ನು ನಿಯೋಜಿಸುವ ಕುರಿತು ಸರ್ಕಾರದ ನಿಲುವೇನು ?